ಆ) ರಾಜ್ಯದಲ್ಲಿರುವ 224 ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿ ರಚನೆಗೆ ಸಂಬಂಧಿಸಿದಂತೆ ಈಗಾಗಲೇ 105 ಕ್ಷೇತ್ರಗಳಿಗೆ ಸಮಿತಿಗಳನ್ನು ರಚಿಸಲಾಗಿದೆ. 69 ಕ್ಷೇತ್ರಗಳಿಗೆ ಸಮಿತಿ ರಚಿಸಲು ಪರಿಶೀಲಿಸಲಾಗುತ್ತಿದೆ. ಉಳಿದ 50 ಕ್ಷೇತ್ರಗಳ ಸಮಿತಿ ರಚಿಸಲು ಪ್ರಸ್ತಾವನೆಗಳನ್ನು ನಿರೀಕ್ಷಿಸಲಾಗುತ್ತಿದೆ. ಆದಕಾರಣ ಈ ಬಗ್ಗೆ ಸರ್ಕಾರದಿಂದ ಯಾವುದೇ ವಿಳಂಬವಾಗಿಲ್ಲ.

757 (1286) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಡೂರು ತಾಲ್ಲೂಕು ಬರಪೀಡಿತ ಪ್ರದೇಶ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಕಡೂರು ತಾಲ್ಲೂಕಿಗೆ ಬರ ನಿರ್ವಹಣೆಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಆರ್ಥಿಕ ನೆರವು ಎಷ್ಟು ;

ಇ) ಹಾಗಿದ್ದಲ್ಲಿ, ಇನ್ನು ಮುಂದೆ ಬಿಡುಗಡೆ ಮಾಡಬೇಕಾಗಿರುವ ಆರ್ಥಿಕ ನೆರವು ಎಷ್ಟು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಹೌದು, ಕಡೂರು ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಲಾಗಿದೆ.

ಆ) ಕಡೂರು ತಾಲ್ಲೂಕಿನಲ್ಲಿ ಬರ ಪರಿಹಾರ ಕೈಗೊಳ್ಳಲು ಒಟ್ಟು ರೂ. 1.00 ಕೋಟಿ ಹಣ ಬಿಡುಗಡೆ ಮಾಡಿದೆ ಹಾಗೂ 1000 ಮೆ.ಟನ್ ಆಹಾರಧಾನ್ಯ ಹಾಗೂ ಕುಡಿಯುವ ನೀರು ಸರಬರಾಜಿಗೆ ರೂ. 25.00 ಲಕ್ಷ ಹಣ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಇ) ಬರ ಪರಿಸ್ಥಿತಿ ತೀವ್ರತೆಗನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುವುದು.

758 (379) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪರವಾನಗಿ ಪಡೆದು ಸಾರಾಯಿ ಮಾರಾಟ ಮಾಡುತ್ತಿರುವ ಅಂಗಡಿಗಳೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ;

ಆ) ರಾಜ್ಯದಲ್ಲಿ ಅನಧಿಕೃತವಾಗಿ ನಡೆಸುತ್ತಿರುವ ಸಾರಾಯಿ ಅಂಗಡಿಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಇವುಗಳನ್ನು ತೆರವು ಮಾಡುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ರಾಜ್ಯದಲ್ಲಿ 15248 ಪರವಾನಗಿ ಪಡೆದ ಸಾರಾಯಿ ಅಂಗಡಿಗಳು ಇರುತ್ತವೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿವೆ: